


ಎಡದಿಂದ ಬಲಕ್ಕೆ:

1. ಮಿಕ್ಕುಹೋದ ಅನ್ನವನ್ನೆಲ್ಲ ಸಾಗಿಸಿದ– ಹೆಸರೇ ಇಲ್ಲದವ (4)
3. ಸಾಕಷ್ಟಿದೆ ಬಿಡಿ ಭಾರೀ ಭಾರೀ ತೊಂದರೆ (3)
7. ವಾಸನೆ ಗ್ರಹಿಸುವ ಅಂಗವನ್ನು ಚೂರು ಮಾಡಿ ತಿರಸ್ಕಾರ ತೋರಿಸು (4)
8. ಬಿಲ್ಲು ತಯಾರಿಸುವ ವಿದ್ಯೆ ತಿಳಿದವ ಗೊತ್ತೇ? (3)
9. ಅಗೆದು ತೆಗೆದಾಗ ಸಿಕ್ಕಿದ್ದು ಎರಡು (2)
12. ಕೆರೆಯ ತೀರದಲ್ಲಿ ಕಳುವಾದದ್ದು ಎಂಥ ಚಪ್ಪಲಿ? (2)
14. ವಾರದುದ್ದಕ್ಕೂ ನಡೆದ ಘಟನೆಗಳ ವಿಸ್ತಾರ ವಿವರ (3)
15. ಜುಟ್ಟೆಳೆದು, ಪೇಟ ಸೆಳೆದು... ಇದೇನು ಬಡಿದಾಟ? (4)
17. ದಶರಥನಿಗೆ ಎದುರಾದದ್ದು ಅದೇ ಸಾಗರ (3)
18. ತಾಂಬೂಲವನ್ನು ಸೇವಿಸಲೇಬೇಕೆಂದು ಒತ್ತಾಯವೇ? (4)

ಮೇಲಿಂದ ಕೆಳಕ್ಕೆ:

1. ಅಷ್ಟೆಲ್ಲ ವಸ್ತುಗಳಲ್ಲಿ ಆಯ್ದದ್ದು ಎಂಟು (2)
2. ಗಮನ ಸೆಳೆಯಲು ಮೂಲವಾದದ್ದು ಎಂಥ ಹೊಳಪು! (3)
4. ವರಕವಿಯನ್ನು ಪ್ರತ್ಯಕ್ಷಗೊಳಿಸಿದ್ದು ಕನಸು ತಾನೇ? (4)
5. ದುಬಾರಿ ಬೆಲೆ ತೆತ್ತು ತೆತ್ತು ಎಲ್ಲ ಖಾಲಿ (3)
6. ಬಾಳಿಕೆ ಬರುವಂಥದ್ದನ್ನೆಲ್ಲ ನುಂಗಿಹಾಕುವುದೇ? (4)
10. ದಿಗಂತವನ್ನ ದಿಟ್ಟಿಸಿದಾಗಲೆಲ್ಲ ನೆನಪಾಗುತ್ತದೆ ಕಳೆದು ಹೋದ ಕಾಲ (4)
11. ವಸಂತರ ಜೊತೆಗೇ ಆರಂಭ ವರ್ಷ (4)
13. ಜ್ವರ ನಿವಾರಣೆ ಆಗುವ ವೇಳೆಗೆ ರಾತ್ರಿ ಆಗಿತ್ತು (3)
16. ನಗೆಪಾಟಲಿಗೆ ದಾರಿ ಮಾಡಿದ್ದು ಇದೇ ಪರದೆ (3)
17. ಶಾಶ್ವತವೇನಲ್ಲ ಬಿಡಿ, ಬರೀ ನೂರು (2)

### ಪದಬಂಧ 24-11-2011ರ ಉತ್ತರಗಳು

ಎಡದಿಂದ ಬಲಕ್ಕೆ:

1. ಸದಾನಂದ; 3. ನಿರ್ಲಜ್ಜ; 4. ಸಮೀರ; 6. ನಮಸ್ಕಾರ; 7. ಕೂಗಳತೆ; 9. ಶತಪದ; 11. ಸುಮಧುರ; 13. ನಗೆಕಾರ; 15. ತಾರಾಲೋಕ; 17. ಕುಕ್ಕುಟ; 18. ರಶೀತಿ; 19. ಕಿಡಿನುಡಿ.

ಮೇಲಿಂದ ಕೆಳಕ್ಕೆ:

1. ಸಜ್ಜನ; 2. ದಸರ; 3. ನಿರಾಳ; 5. ರಹಿತ; 7. ಕೂರಿಸು; 8. ತೆಪರ; 9. ಶಮನ; 10. ದಫ್ತರ; 12. ಧುಮುಕು; 14. ಗೆಳತಿ; 15. ತಾಟಕಿ; 16. ಕರಡಿ.

## ಪ್ರಾಣಿ ಪ್ರಪಂಚ

# ಜೆಲ್ಲಿ ಮೀನು – ಅದೇನು?

ಅದು ಹೆಸರಿನಲ್ಲಷ್ಟೇ ಮೀನು. ಏಕೆಂದರೆ ರೂಪದಲ್ಲಿ, ಆಕಾರದಲ್ಲಿ, ಈಜುವ ಕ್ರಮದಲ್ಲಿ, ಜೈವಿಕ ಸ್ವರೂಪದಲ್ಲಿ... ಹಾಗೆ ಯಾವುದೇ ಗುಣದಲ್ಲೂ, ಲಕ್ಷಣದಲ್ಲೂ ಮೀನುಗಳಿಗೂ ಜೆಲ್ಲಿ ಮೀನುಗಳಿಗೂ ಯಾವ ಸಾಮ್ಯವೂ ಇಲ್ಲ ಸಂಬಂಧವೂ ಇಲ್ಲ.

ಅಕಶೇರುಕ ಪ್ರಾಣಿಗಳ (ಎಂದರೆ ಬೆನ್ನೆಲುಬು ಇಲ್ಲದ ಪ್ರಾಣಿಗಳ) ವರ್ಗದ ಒಂದು ಉಪವರ್ಗವಾದ 'ಸಿಲಿಂಟೆರೇಟ್'ಗಳಲ್ಲಿ 'ಹೈಡ್ರೋಜೋವಾ' ಎಂಬೊಂದು ವಿಶಿಷ್ಟ ಗುಂಪಿದೆ. ಹೈಡ್ರಾಗಳು, ಹವಳದ ಜೀವಿಗಳು. ಸೇರಿರುವ, ಬಹುಪಾಲು ಸಾಗರವಾಸಿಗಳೇ ಆಗಿರುವ ಪ್ರಾಣಿಗಳ ಇದೇ ಗುಂಪಿಗೇ ಜೆಲ್ಲಿ ಮೀನುಗಳೂ ಸೇರಿವೆ. ಜೆಲ್ಲಿ ಮೀನುಗಳದು ಗಂಟೆಯಂತಹ ಅಥವಾ ತೆರೆದ ಪ್ಯಾರಾಶೂಟ್‌ನಂತಹ ಆಕಾರ. ಹೀಗೆ ಗೂಡೆ ಅಥವಾ ಗಂಟೆ ಆಕಾರದ ಶರೀರದ ತಳದಲ್ಲೊಂದು ರಂಧ್ರ– ಅದೇ ಜೆಲ್ಲಿ ಮೀನಿನ ಬಾಯಿ. ಈ ಬಾಯಿಯನ್ನು ಪರಿವರಿಸಿ ಬೆಳೆದ ದಾರ ದಾರದಂತಹ ತೆಳ್ಳನ್ನ ಹಗ್ಗದಂತಹ ಉದ್ದುದ್ದವಾದ ಹೇರಳ ಚಾಚು ಕೈಗಳು. ಪ್ರತಿಯೊಂದರಲ್ಲೂ ಉದ್ದಕ್ಕೂ ಅಸಂಖ್ಯ ಕುಟುಕು ಕೋಶಗಳು; ಅವೆಲ್ಲ ವಿಷಭರಿತ ಕೂಡ. ಬಾಯೊಳಕ್ಕೆ ನೀರನ್ನೆಳೆದು ಅದನ್ನೇ ರಭಸವಾಗಿ ಉಗಿಯುತ್ತ ಜೆಲ್ಲಿ ಮೀನಿನ ಈಜಾಟ.



ಜೆಲ್ಲಿ ಮೀನಿನ ಪರಮ ವೈಶಿಷ್ಟ್ಯ ಏನೆಂದರೆ ಅದರ ಶರೀರದ್ದು ನೀರಿನದೇ ಬಣ್ಣ; ಬಹುಪಾಲು ನಿರ್ವರ್ಣ. ಏಕೆಂದರೆ ಅದರ ಶರೀರದ ಮೇಲ್ಮೈ ಎರಡು ಪದರಗಳಿಂದಾಗಿದೆ. ಎಕ್ಟೋಡರ್ಮ್ ಮತ್ತು ಎಂಡೋಡರ್ಮ್ (ಹೊರ ಚರ್ಮ ಮತ್ತು ಒಳ ಚರ್ಮ) ಎಂಬ ಈ ಪದರಗಳ ನಡುವೆ ಇರುವ ಮೀಸೋಗ್ಲೋಯಿಯಾ ಎಂಬೊಂದು ಪದರ ಪಾರದರ್ಶಕವಾದ, ಗಟ್ಟಿ ದ್ರವ ರೂಪದ 'ಜೆಲ್ಲಿ'ಯನ್ನು ಭಾರೀ ಪ್ರಮಾಣದಲ್ಲಿ ಉತ್ಪಾದಿಸುತ್ತದೆ. ಚರ್ಮದ ಎರಡೂ ಪದರಗಳ ನಡುವೆ ತುಂಬಿ ನಿಲ್ಲುವ ಈ ದ್ರವದಿಂದಾಗಿ ಜೆಲ್ಲಿ ಮೀನಿನ ಇಡೀ ಶರೀರವೇ ಬಹುಪಾಲು ಪಾರದರ್ಶಕ ನೀರಿನಲ್ಲಂತೂ ಅದು ಅಗೋಚರ; ಚಂದಿ ಚಂದಿಯಾದ ಪಾರಕ ಪ್ಲಾಸ್ಟಿಕ್‌ನಂತಷ್ಟೇ ಅದು ಗೋಚರ.

ಕಡಲಿನ ಚಿಕ್ಕ ಜೀವಿಗಳು, ಪುಟ್ಟ ಮೀನುಗಳು ಜೆಲ್ಲಿ ಮೀನಿನ ಆಹಾರ. ಸಮೀಪ ಬಂದ ಬಲಿಯನ್ನು ಚಾಚು ಕೈಗಳಿಂದ ಹಿಡಿದು ಕುಟಕಿ ವಿಷ ಚುಚ್ಚಿ ನಿಶ್ಚೇಷ್ಟಿತವಾಗಿಸಿ ಬಾಯಿಗೆಳೆದು ಹೀರಿ ಹಾಕುವುದು. ಅದರ ಆಹಾರ ಸೇವನಾ ಕ್ರಮ. ಜೆಲ್ಲಿ ಮೀನುಗಳಲ್ಲಿ ವಿಧ ವಿಧ ಪ್ರಭೇದಗಳಿವೆ. ಕೆಲವಾರು ಅಡಿ ವ್ಯಾಸದ ತಟ್ಟೆಯಂತಿರುವ, ಐವತ್ತು ಅಡಿ ಉದ್ದದ ಚಾಚು ಕೈಗಳಿರುವ ಬೃಹತ್ ವಿಧಗಳಿವೆ. ಜೆಲ್ಲಿ ಮೀನುಗಳ ಸಕಲ ಪ್ರಭೇದಗಳಲ್ಲೂ 'ಬಾಕ್ಸ್ ಜೆಲ್ಲೀ' ಪ್ರಭೇದ ಅತ್ಯಂತ ವಿಷಕರ.

■ ಎನ್. ವಾಸುದೇವ್